ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಸಿ7[2]ಪ್ರಾಶಿಅ.ಹೊ.ಶಾ.ನೋಂ.104/2019-20 ದಿನಾಂಕ:30ನೇ ಏಪ್ರಿಲ್ 2020

**: : ಸುತ್ತೋಲೆ : :**

ವಿಷಯ: 2020-21ನೇ ಸಾಲಿನಲ್ಲಿ ಹೊಸದಾಗಿ ಶಾಶ್ವತ ಅನುದಾನರಹಿತ ಪೂರ್ವಪ್ರಾಥಮಿಕ/ ಪ್ರಾಥಮಿಕ/ಪ್ರೌಢಶಾಲೆಗಳನ್ನು ಪ್ರಾರಂಭಿಸಲು ನೋಂದಣಿ ನೀಡುವ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ:25-11-2019 ಮತ್ತು ದಿನಾಂಕ:21-1-2020 ದಿನಾಂಕ:12-3-2020, 21-03-2020.

*****

2020-21ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪೂರ್ವ ಪ್ರಾಥಮಿಕ/ಪ್ರಾಥಮಿಕ ಕಿರಿಯ, ಹಿರಿಯ ಹಾಗೂ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳು ಆನ್‌ಲೈನ್ ಮುಖಾಂತರ **ದಿ:23-12-2019 ರಿಂದ ದಿ:23-1-2020ರವರೆಗೆ ಇಲಾಖಾ ವೆಬ್‌ಸೈಟ್‌ನಲ್ಲಿ** [www.schooleducation.kar.nic.in] ಅರ್ಜಿಗಳನ್ನು ಸಲ್ಲಿಸಲು ಉಲ್ಲೇಖದ ಸುತ್ತೋಲೆಗಳಲ್ಲಿ ತಿಳಿಸಲಾಗಿತ್ತು. ನಂತರ ಸರ್ಕಾರದ ನಿರ್ದೇಶನದಂತೆ ಅಂತಿಮವಾಗಿ ಹೊಸ ಶಾಲೆಗಳ ನೊಂದಣಿ ದಿನಾಂಕ:20-3-2020ರವರೆಗೆ ವಿಸ್ತರಿಸಿ ಅವಕಾಶ ಕಲ್ಪಿಸಲಾಗಿತ್ತು.

ಈಗಾಗಲೇ ಅಂತಿಮ ದಿನಾಂಕ ಮುಗಿದಿರುವುದರಿಂದ ಹಾಗೂ ಕೋವಿಡ್-19 ಹಿನ್ನೆಲೆಯಲ್ಲಿ ಭಾರತಾದ್ಯಂತ ಲಾಕ್ ಡೌನ್ ಆದ ಕಾರಣ ಹೊಸ ಶಾಲೆ ನೋಂದಣಿಗೆ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಕ್ರಮಕೈಗೊಳ್ಳಲು ಸಾಧ್ಯವಾಗದಿರುವುದರಿಂದ ಈ ಕೆಳಕಂಡಂತೆ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ. ಹಿಂದಿನ ಉಲ್ಲೇಖಿತ ಪತ್ರಗಳಲ್ಲಿ ತಿಳಿಸಿರುವ ಅಂಶಗಳು ಮುಂದುವರೆಯುತ್ತವೆ.

| ಕ್ರ.ಸಂ | ವಿಷಯ | ಪರಿಷ್ಕೃತ ದಿನಾಂಕ |
|---|---|---|
| 1 | 1] ಕ್ಷೇತ್ರ ಶಿಕ್ಷಣಾಧಿಕಾರಿಗಳು ಪೂರ್ವ ಪ್ರಾಥಮಿಕ ಶಾಲೆಗಳಿಗೆ ಅನುಮತಿ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ವಿಳಂಬ ಮಾಡದೇ ಅರ್ಜಿಯನ್ನು ನಿಯಮಾನುಸಾರ ಇತ್ಯರ್ಥಪಡಿಸುವುದು. | 20-05-2020 |
| | 2] ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವಲಯದಲ್ಲಿ ಆನ್‌ಲೈನ್ ಮುಖಾಂತರ ಸಲ್ಲಿಸಿರುವ ಹೊಸ ಶಾಲಾ ಅರ್ಜಿಗಳನ್ನು ಪರಿಶೀಲಿಸಿ ಹೊಸದಾಗಿ ಅಭಿವೃದ್ಧಿಪಡಿಸಿರುವ ತಂತ್ರಾಂಶದಲ್ಲಿ ಸ್ಪಷ್ಟ ಅಭಿಪ್ರಾಯದೊಂದಿಗೆ ಜಿಲ್ಲಾ ಉಪನಿರ್ದೇಶಕರಿಗೆ ಅರ್ಜಿಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸುವುದು. | 08-05-2020 |
| 2 | 1] ಹೊಸ ಶಾಲಾ ಅರ್ಜಿಗಳಲ್ಲಿ ತಮ್ಮ ಹಂತದಲ್ಲೇ ನೋಂದಣಿ ನೀಡುವಂತಹ [1ರಿಂದ5, 6 ರಿಂದ8, 1ರಿಂದ8] ರವರೆಗಿನ ಶಾಲೆಗಳ ನೋಂದಣಿಯನ್ನು ತ್ರಿ ಸದಸ್ಯ ಸಮಿತಿಯ ವರದಿಯನ್ನು ಪಡೆದು ಅರ್ಜಿಗಳನ್ನು ವಿಳಂಬ ಮಾಡದೇ ನಿಯಮಾನುಸಾರ ಇತ್ಯರ್ಥಪಡಿಸುವುದು. | 26-05-2020 |
| | 2] ಉಪನಿರ್ದೇಶಕರು ತಮ್ಮ ಜಿಲ್ಲೆಯಲ್ಲಿ 1 ರಿಂದ 10 ಮತ್ತು 9 ರಿಂದ 10 ರವರೆಗಿನ ಶಾಲೆಗಳನ್ನು ಪ್ರಾರಂಭಿಸಲು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ತ್ರಿ ಸದಸ್ಯರ ಸಮಿತಿಯ ವರದಿಯೊಂದಿಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ವಿಳಂಬ ಮಾಡದೇ ಇತ್ಯರ್ಥಪಡಿಸಲು ಆಯುಕ್ತಾಲಯಕ್ಕೆ ಸಲ್ಲಿಸುವುದು. | 20-05-2020 |
| 3 | ಉಪನಿರ್ದೇಶಕರಿಂದ ಆನ್‌ಲೈನ್ ಮುಖಾಂತರ ಸ್ವೀಕೃತಿಯಾದ ಅರ್ಜಿಗಳನ್ನು ನಿರ್ದೇಶಕರು [ಪ್ರೌಢಶಿಕ್ಷಣ] ರವರು ಪರಿಶೀಲಿಸಿ ಮಾನ್ಯ ಆಯುಕ್ತರ ಅನುಮೋದನೆ ಪಡೆದು ನಿಯಮಾನುಸಾರ ಇತ್ಯರ್ಥಪಡಿಸುವುದು. | 30-05-2020 |

---2]

ಪರಿಷ್ಕೃತ ವೇಳಾಪಟ್ಟಿಯಂತೆ ಹೊಸ ಶಾಲೆಗಳ ನೋಂದಣಿ ಅಂತಿಮ ದಿನಾಂಕದ ನಂತರ ತಮ್ಮ ಜಿಲ್ಲೆಯಲ್ಲಿ ಇತ್ಯರ್ಥವಾಗದೇ ಉಳಿದಿರುವ ಹೊಸ ಶಾಲೆಗಳ ನೋಂದಣಿ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಅದರ ಪ್ರತಿಯೊಂದಿಗೆ ಪ್ರತಿ ಪ್ರಕರಣಗಳನ್ನು ಪ್ರತ್ಯೇಕವಾಗಿ ನಿಗಧಿತ ದಿನಾಂಕದೊಳಗೆ ಏಕೆ ಇತ್ಯರ್ಥಪಡಿಸಲಾಗಿಲ್ಲ ಎಂಬ ಬಗ್ಗೆ ವಿವರಣೆಯೊಂದಿಗೆ ನಿರ್ದೇಶಕರು[ಪ್ರಾಥಮಿಕ ಶಿಕ್ಷಣ] ಇವರಿಗೆ ಸಲ್ಲಿಸಲು ಸೂಚಿಸಿದೆ.

[ಡಾ:ಕೆ.ಜಿ.ಜಗದೀಶ ಭಾ.ಆ.ಸೇ]
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ,

1. ರಾಜ್ಯದ ಎಲ್ಲಾ ತಾಲ್ಲೂಕು/ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು[ಆಡಳಿತ] ರವರಿಗೆ

**ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:–**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ ಇವರಿಗೆ ಕಳುಹಿಸುತ್ತಾ ನಿಯಮಾನುಸಾರ ಕ್ರಮವಹಿಸಲು ತಿಳಿಸಿದೆ.
2. ಕಾರ್ಯಕ್ರಮಾಧಿಕಾರಿಗಳು, ಎಸ್.ಎ.ಟಿ.ಎಸ್ ವಿಭಾಗ, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು.
3. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು
4. ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವಲಪ್ ಮೆಂಟ್ ಸೆಂಟರ್, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು
5. ಕಛೇರಿ ಪ್ರತಿ.